# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೇಶವ ಪ್ರಸಾದ್.ಎಸ್. ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.

**ವಿಷಯ:**

ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ "ಕೃಷ್ಣಾ ಕಣಿವೆಯ ಆಲಮಟ್ಟಿಗೆ ಮಹಾಘಾತ!" ಎಂಬ ತಲೆ ಬರಹದಡಿಯಲ್ಲಿ ಪ್ರಕಟಗೊಂಡ ವರದಿಯನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರುತ್ತೇನೆ.

ಆಲಮಟ್ಟಿ ಸಂತ್ರಸ್ತರಿಗೆ ಈ ಬಾರಿಯ ಬಜೆಟ್‌ನಲ್ಲಿ ಒಂದೇ ಹಂತದಲ್ಲಿ ಪರಿಹಾರ ನೀಡಲು ಪ್ರಯತ್ನಿಸುವುದಾಗಿ ಮುಖ್ಯಮಂತ್ರಿ ಪ್ರಸ್ತಾಪಿಸಿದ್ದಾರೇನೋ ನಿಜ. ಆದರೆ ಈಗ 3ನೇ ಹಂತದ ಯೋಜನೆ ಪೂರ್ತಿಗೊಳಿಸಲು ಅಗತ್ಯ ಅನುದಾನ ಒದಗಿಸುವುದು ರಾಜ್ಯ ಸರಕಾರಕ್ಕೆ ದೊಡ್ಡ ಸವಾಲಾಗಿದೆ. ಜತೆಗೆ ಮಹಾ ಕ್ಯಾತೆ ತೆಗೆದಿರುವುದು ಆತಂಕ ಸೃಷ್ಟಿಸಿದೆ.

ಡ್ಯಾಂ ಎತ್ತರದಿಂದಾಗಿ ಬಾಗಲಕೋಟೆ, ವಿಜಯಪುರ ಜಿಲ್ಲೆಗಳ ಮುಳುಗಡೆ ಯಾಗಲಿರುವ 20 ಗ್ರಾಮಗಳ ಪುನರ್ವಸತಿ, ಪುನರ್ ನಿರ್ಮಾಣ, 1 ಲಕ್ಷ ಎಕರೆ ಭೂ ಪರಿಹಾರ ಹಾಗೂ ಸ್ವಾಧೀನ ಸೇರಿದಂತೆ ಒಟ್ಟು 87,818 ಕೋಟಿ ರೂ. ವೆಚ್ಚದ ಪ್ರಸ್ತಾವನೆಯನ್ನು ಕೆಬಿಜೆಎನ್‌ಎಲ್ ಸರಕಾರಕ್ಕೆ ಸಲ್ಲಿಸಿದೆ. ಆದರೀಗ ಆಲಮಟ್ಟಿ ಅಣೆಕಟ್ಟೆಯ ಎತ್ತರ ಹೆಚ್ಚಿಸುವ ಕರ್ನಾಟಕದ ಪ್ರಸ್ತಾಪ ಪ್ರಶ್ನಿಸಿ ಸುಪ್ರೀಂ ಕೋರ್ಟ್ ನಲ್ಲಿ ಮಹಾರಾಷ್ಟ್ರ ಅರ್ಜಿ ಸಲ್ಲಿಸಲು ಹೊರಟಿರುವುದು ಈ ಭಾಗದ ರೈತರಿಗೆ ಆಘಾತ ತಂದಿದೆ.

15 ವರ್ಷಗಳ ನಂತರ ಕ್ಯಾತೆ: ಕೃಷ್ಣಾ 2ನೇ ನ್ಯಾಯಾಧಿಕರಣ 2010 ರ ಡಿ.30 ರಂದು ತೀರ್ಪು ನೀಡಿ, ಆಲಮಟ್ಟಿ ಅಣೆಕಟ್ಟೆಯನ್ನು 524.256 ಮೀಟರ್‌ಗೆ ಎತ್ತರಿಸಿ, ಹೆಚ್ಚುವರಿ ನೀರು ಅವಕಾಶ ಬಳಸಿಕೊಳ್ಳಲು ಕೊಟ್ಟಿದೆ. 15 ವರ್ಷ ಕಳೆದರೂ ಹಂಚಿಕೆಯಾದ ನೀರನ್ನು ಬಳಸಿಕೊಳ್ಳುವುದು ಸಾಧ್ಯವಾಗಿಲ್ಲ.

ನ್ಯಾಯಾಧಿಕರಣ ತೀರ್ಪು ಕರ್ನಾಟಕಕ್ಕೆ ವರವಾಗಿದ್ದರೂ ಆಂಧ್ರ, ತೆಲಂಗಾಣ ಕೊಕ್ಕೆ ಹಾಕಿವೆ. ಅಲ್ಲದೆ, ತೀರ್ಪಿನ ಬಗ್ಗೆ ಕೇಂದ್ರ ಸರಕಾರದ ಅಧಿಸೂಚನೆ ಪ್ರಕಟಿಸಿಲ್ಲ. ಇದನ್ನೇ ನೆಪ ಮಾಡಿಕೊಂಡು ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಸರಕಾರಗಳು ಆಲಮಟ್ಟಿ ಡ್ಯಾಂ ಎತ್ತರಿಸಿ ಹೆಚ್ಚುವರಿ ನೀರು ಬಳಸಿಕೊಳ್ಳಲು ದೃಢ ಹೆಜ್ಜೆ ಇಡಲೇ ಇಲ್ಲ. ಇಂಥ ಹೊತ್ತಿನಲ್ಲೇ ಮಹಾರಾಷ್ಟ್ರ ಸುಮ್ಮನೆ ಕ್ಯಾತೆ ತೆಗೆದಿದೆ ಎಂದು ನೀರಾವರಿ ತಜ್ಞರೂ ಕಳವಳ ವ್ಯಕ್ತಪಡಿಸಿದ್ದಾರೆ.

ಆಲಮಟ್ಟಿ ಡ್ಯಾಂ ಎತ್ತರಿಸಿದರೂ ಹಿನ್ನೀರು ಅಥಣಿ ತಾಲ್ಲೂಕಿನ ಹಿಪ್ಪರಗಿ ಡ್ಯಾಂವರೆಗೆ ಮಾತ್ರ ತಲುಪಲಿದೆ. ಮಹಾರಾಷ್ಟ್ರಕ್ಕೆ ಹಾನಿಯಾಗದು. ಈಗಾಗಲೇ ಮಹಾರಾಷ್ಟ್ರ ತನಗೆ ಬೇಕಾದಷ್ಟು ನೀರು ಬಳಸಿಕೊಂಡಿದ್ದರೂ ತಕರಾರು ಸರಿಯೇ ಎಂದು ಹೋರಾಟಗಾರರು ಪ್ರಶ್ನಿಸಿದ್ದಾರೆ.

1964 ರಲ್ಲಿ ಅಡಿಗಲ್ಲು ಹಾಕಿದರೂ, 2000ನೇ ಇಸ್ವಿಯಲ್ಲಿ ನೀರು ಸಂಗ್ರಹ ಶುರುವಾಯಿತು. ಯುಕೆಪಿ-3ನೇ ಹಂತದ ಯೋಜನೆ ಅನುಷ್ಠಾನ ಬಾಕಿ ಇದ್ದು, ಅದಾಗಬೇಕಾದರೆ ಡ್ಯಾಂ ಎತ್ತರ ಅತ್ಯಗತ್ಯ. ಡ್ಯಾಂನಲ್ಲಿ ಸದ್ಯ ಏಳೆಂಟು ಟಿಎಂಸಿ ಹೂಳು ತುಂಬಿದೆ. ಡ್ಯಾಂ ಎತ್ತರಿಸಿ ಹೆಚ್ಚುವರಿ ನೀರು ಬಳಕೆ ತ್ವರಿತ ಆಗದಿದ್ದರೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಹೂಳು ತುಂಬಲಿದೆ. ಡ್ಯಾಂ ಕುಡಿಯುವ ನೀರಿನ ಉದ್ದೇಶಕ್ಕಷ್ಟೇ ಆಗುವ ಆತಂಕವೂ ವ್ಯಕ್ತವಾಗಿದೆ. ಅದ್ದರಿಂದ ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ತ್ವರಿತ ಗತಿಯಲ್ಲಿ ಕಾರ್ಯ ಪ್ರವೃತ್ತವಾಗಬೇಕೆಂದು ಆಗ್ರಹಿಸಲಾಗಿದೆ.

*******

ಕೃಷ್ಣಾ ಜಲವಿವಾದ ನ್ಯಾಯಾಧೀಕರಣ-2ರ ಅಂತಿಮ ತೀರ್ಪಿನಲ್ಲಿ ರಾಜ್ಯಕ್ಕೆ ಹಂಚಿಕೆಯಾದ ಒಟ್ಟಾರೆ 173 ಟಿ.ಎಂ.ಸಿ. (ನದಿ ಪಾತ್ರದಡಿ ನೈಸರ್ಗಿಕ ಹರಿವು 7 ಟಿ.ಎಂ.ಸಿ. ಒಳಗೊಂಡು) ಪೈಕಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ಯೋಜನೆಗೆ 130 ಟಿ.ಎಂ.ಸಿ ಹಂಚಿಕೆಯಾಗಿರುತ್ತದೆ. ಕೃಷ್ಣಾ ಜಲವಿವಾದ ನ್ಯಾಯಾಧೀಕರಣ-2 ಅಂತಿಮ ತೀರ್ಪು ಕೇಂದ್ರ ಸರ್ಕಾರದಿಂದ ಗೆಜೆಟ್ ಪ್ರಕಟಣೆ ಆಗಬೇಕಾಗಿರುತ್ತದೆ. ಕೃಷ್ಣಾ ಮೇಲ್ದಂಡೆ ಯೋಜನೆ ಹಂತ -3ರ ಯೋಜನೆಗೆ ಹಂಚಿಕೆಯಾದ 130 ಟಿ.ಎಂ.ಸಿ. ನೀರಿನ ಬಳಕೆಗಾಗಿ

ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆಯನ್ನು RL 519.60 Mt. ದಿಂದ RL 524.256 Mt. ವರೆಗೆ ಎತ್ತರಿಸುವುದನ್ನುಒಳಗೊಂಡಿರುತ್ತದೆ.

ಕೃಷ್ಣಾ ಮೇಲ್ದಂಡೆ ಹಂತ-3ರಡಿ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆಯನ್ನು RL 519.60 Mt. ದಿಂದ RL 524.256 Mt. ವರೆಗೆ ಎತ್ತರಿಸುವ ಕುರಿತಂತೆ ಈಗಾಗಲೇ ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ-2ರ ಅಂತಿಮ ತೀರ್ಪಿನ ವರದಿ (2010ರಲ್ಲಿ)ಯಲ್ಲಿ "Height of Almatti Dam – Issue No.14 ರಲ್ಲಿ ಈ ಕೆಳಗಿನಂತೆ ನಮೂದಿಸಲಾಗಿರುತ್ತದೆ.

> "Whether Karnataka is entitled to storage of water up to the level of 524.256 m in the Almatti Dam or the height of the Almatti Dam be restricted at 515 m as claimed by Andhra Pradesh or 512 m as claimed by Maharashtra?"

ಮೇಲ್ಕಂಡ Issue No.14ಗೆ ಸಂಬಂಧಪಟ್ಟಂತೆ, ಕೃಷ್ಣಾ ಜಲವಿವಾದ ನ್ಯಾಯಾಧೀಕರಣ-2 ರ ವರದಿಯಲ್ಲಿಅಂತಿಮವಾಗಿ ಈ ಕೆಳಕಂಡಂತೆ ತೀರ್ಪು ದಾಖಲಿಸಿರುತ್ತದೆ.

> "In view of the discussion held above, we decide the issue in affirmative to the extent that State of Karnataka is entitled to storage of water up to the level of 524.256 m in Almatti Reservoir and in negative to the extent that height of Almatti Dam may be restricted at 515 m as claimed by Andhra Pradesh or 512 m as claimed by Maharashtra."

ಮುಂದುವರೆದು, ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ-2ರ ಅಂತಿಮ ವರದಿ (2010 Vol-IV) ಯಲ್ಲಿ Submergence in Maharashtra ಕುರಿತಂತೆ Issue No.10 ರಲ್ಲಿ ಈ ಕೆಳಕಂಡಂತೆನಮೂದಿಸಲಾಗಿರುತ್ತದೆ.

> "Whether, it is lawful for the State of Karnataka to construct dams or barrages or weirs which may or likely to submerge the territories of Maharashtra without its consent?"

ಮೇಲ್ಕಂಡ Issue No.10ಗೆ ಸಂಬಂಧಪಟ್ಟಂತೆ, ಕೃಷ್ಣಾ ಜಲವಿವಾದ ನ್ಯಾಯಾಧೀಕರಣ-2ರ ವರದಿಯಲ್ಲಿಅಂತಿಮವಾಗಿ ಈ ಕೆಳಕಂಡಂತೆ ತೀರ್ಪು ದಾಖಲಿಸಿರುತ್ತದೆ.

> "......... After considering the facts and circumstances, it has been held that the State of Karnataka could go ahead with FRL 524.256 m at Almatti Dam. It has been held that no submergence was likely to take place in the State of Maharashtra on the basis of the report of the hydrographic survey conducted about actual sedimentation in Hipparagi Barrage and Almatti Dam."

ಮೇಲ್ಕಂಡ ಇತ್ಯರ್ಥಗೊಂಡ ವಿಷಯದ ಕುರಿತಂತೆ ಮಹಾರಾಷ್ಟ್ರ ರಾಜ್ಯವು ಸುಪ್ರೀಂಕೋರ್ಟ್‌ನಲ್ಲಿ ಮಧ್ಯಂತರ ಅರ್ಜಿ ಸಲ್ಲಿಸಿದ ಪಕ್ಷದಲ್ಲಿ, ರಾಜ್ಯ ಸರ್ಕಾರವು ಶೀಘ್ರದಲ್ಲಿಯೇ ಎಲ್ಲಾ ಕಾನೂನಾತ್ಮಕ ಕ್ರಮಗಳನ್ನು ಜರುಗಿಸಲು ಸಿದ್ಧವಿರುತ್ತದೆ.

ದಿನಾಂಕ:16.12.2024ರಂದು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಹಾಗೂ ಸನ್ಮಾನ್ಯ ಉಪ ಮುಖ್ಯಮಂತ್ರಿಗಳ ಉಪಸ್ಥಿತಿಯಲ್ಲಿ ಬೆಳಗಾವಿಯಲ್ಲಿ ಪ್ರಮುಖವಾಗಿ ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ–3ರ ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್‌ನಿರ್ಮಾಣದ ವಿಷಯಗಳ ಕುರಿತು, ಬಾಗಲಕೋಟೆ–ವಿಜಯಪುರ ಜಿಲ್ಲೆಯ ಜನ ಪ್ರತಿನಿಧಿಗಳು ಹಾಗೂ ಯೋಜನೆಯ ಮುಳುಗಡೆ ಸಂತ್ರಸ್ತರೊಂದಿಗೆ ಸಭೆಯನ್ನು ಜರುಗಿಸಲಾಗಿದ್ದು, ಸಭೆಯಲ್ಲಿ ಚರ್ಚಿಸಿದಂತೆ ಪ್ರಮುಖ

ಬೇಡಿಕೆಗಳನ್ವಯ, ಕೃಷ್ಣಾ ಮೇಲ್ದಂಡೆ ಹಂತ-3ರ ಭೂಸ್ವಾಧೀನತೆ ಮತ್ತು ಪುನರ್‌ವಸತಿ & ಪುನರ್ ನಿರ್ಮಾಣಗಳ ಕುರಿತು ಕೈಗೊಂಡ ನಿರ್ಣಯಗಳು, ಒಪ್ಪಂದದ ಐತೀರ್ಪಿ (Consent Award) ನ ಪರಿಷ್ಕರಣೆ ಹಾಗೂ ಯೋಜನೆಯ ಪರಿಷ್ಕೃತ ಅಂದಾಜು ಪ್ರಸ್ತಾವನೆಗಳ ಕುರಿತು ಅಗತ್ಯ ಅನುಮೋದನೆಗಾಗಿ ಸಚಿವ ಸಂಪುಟದ ಮುಂದೆ ಮಂಡಿಸಲು ಕ್ರಮ ವಹಿಸಲಾಗುತ್ತಿದೆ.

ಅಣೆಕಟ್ಟುಗಳ ನಿರ್ಮಾಣ ಮಾಡುವಾಗ ಸಂಗ್ರಹಿಸಲಾದ ಹೂಳು ಸರಾಗವಾಗಿ ಹರಿದು ಹೋಗುವಂತೆ, River Sluice ಗಳಲ್ಲಿ ತಾತ್ಕಾಲಿಕವಾಗಿ ವ್ಯವಸ್ಥೆ ಮಾಡಿಕೊಂಡು ವಿನ್ಯಾಸಿಸಲಾಗಿರುತ್ತದೆ. 2022-23ರಲ್ಲಿ ನ್ಯಾಷನಲ್ ಹೈಡ್ರಾಲಾಜಿ ಪ್ರಾಜೆಕ್ಟ್ ಅಡಿಯಲ್ಲಿ ಆಲಮಟ್ಟಿ ಜಲಾಶಯದ ಹೂಳು ಅಧ್ಯಯನವನ್ನು ನಡೆಸಲು ಮೆ: ಜೀಯೋ ಮರೈನ್ ಸಲ್ಯುಷನ್ಸ್ ಮಂಗಳೂರು ಇವರಿಗೆ ಕೆ.ಇ.ಆರ್.ಎಸ್ ವತಿಯಿಂದ ಕಾಮಗಾರಿಯನ್ನು ವಹಿಸಲಾಗಿರುತ್ತದೆ. ಮೆ: ಜೀಯೋ ಮರೈನ್ ಸಲ್ಯುಷನ್ಸ್ ಮಂಗಳೂರು ಇವರು ನೀಡಿರುವ ವರದಿಯ ಅನುಸಾರವಾಗಿ ಜಲಾಶಯದ ಒಟ್ಟು ಸಂಗ್ರಹಣೆಯಲ್ಲಿ 7.62 ಟಿ.ಎಂ.ಸಿ. ರಷ್ಟು ಹೂಳು ತುಂಬಿರುತ್ತದೆ. ಪ್ರಸ್ತುತ, ಹೂಳು ಪ್ರಮಾಣ ಸಂಗ್ರಹಣೆಯು ವಿನ್ಯಾಸಿಸಲಾದ (Allowable limits) ಪರಿಮಿತಿಯಲ್ಲಿ ಇರುತ್ತದೆ. ಆದುದರಿಂದ, ಪ್ರಸ್ತುತ ಹೂಳು ತೆಗೆಯುವ ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲ.

ದಿನಾಂಕ:16.09.2011ರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪನ್ನು ಗೆಜೆಟ್ ಪ್ರಕಟಣೆ ಮಾಡದಂತೆ ಕೇಂದ್ರ ಸರ್ಕಾರಕ್ಕೆ ಆದೇಶಿಸಲಾಗಿದ್ದು, ಸದರಿ ತೀರ್ಪನ್ನು ಮಾರ್ಪಡಿಸುವಂತೆ ಕೋರಿ ರಾಜ್ಯ ಸರ್ಕಾರವು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಮಧ್ಯಕಾಲೀನ ಅರ್ಜಿಗಳನ್ನು ಸಲ್ಲಿಸಿದೆ.

ಕೃಷ್ಣಾ ನ್ಯಾಯಾಧೀಕರಣದ ಅಂತಿಮ ತೀರ್ಪಿನ್ನು ಗೆಜೆಟ್ ಅಧಿಸೂಚನೆ ಹೊರಡಿಸುವ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಮಾರ್ಪಡಿಸಲು ಸೂಕ್ತ ಅಫಿಡವಿಟ್ ಸಲ್ಲಿಸಿ ನಂತರ ನ್ಯಾಯಾಧೀಕರಣದ ಆದೇಶವನ್ನು ಪ್ರಕಟಿಸಲು ಅಗತ್ಯ ಕ್ರಮ ಕೈಗೊಳ್ಳಲು ನಿರಂತರವಾಗಿ ಕೇಂದ್ರ ಸರ್ಕಾರವನ್ನು ಕೋರಲಾಗಿದೆ. ಸದರಿ ವಿಷಯದ ಕುರಿತು ರಾಜ್ಯ ಸರ್ಕಾರವು ಎಲ್ಲಾ ಆಡಳಿತಾತ್ಮಕ ಹಾಗೂ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗಿದೆ.

(ಜಸಂಇ 39 ಡಬ್ಲ್ಯೂ.ಎಂ 2025)

(ಡಿ.ಕೆ. ಶಿವಕುಮಾರ್)
ಉಪಮುಖ್ಯಮಂತ್ರಿಗಳು